ಪರಿಸರ ಪಾಠ

# ಕೊಡಗಿನಲ್ಲಿ ಏನಾಯಿತು? ಏನಾಗಬೇಕು?

–ಡಾ. ಟಿ.ವಿ. ರಾಮಚಂದ್ರ



**ಕೊಡಗಿನಲ್ಲಿ ಪ್ರವಾಹಕ್ಕೆ ಸಿಕ್ಕಿ ಬೆಟ್ಟ ಗುಡ್ಡ ತೋಟಗಳಿರಲಿ, ಗ್ರಾಮಕ್ಕೆ ಗ್ರಾಮಗಳೇ ಕೊಚ್ಚಿಕೊಂಡು ಹೋಗಿವೆ. ಸಾವಿರಾರು ಜನ ಮನೆ ಮಠ–ಆಸ್ತಿಪಾಸ್ತಿಗಳನ್ನು ಕಳೆದುಕೊಂಡು ಸಂತ್ರಸ್ತರಾಗಿದ್ದಾರೆ. ಕೊಡಗು ಮತ್ತೆ ತನ್ನ ಸೊಬಗಿಗೆ, ನೆಮ್ಮದಿಗೆ ಮರಳಲು ವರ್ಷಗಳೇ ಬೇಕಾದಾವು ಎನ್ನಲಾಗುತ್ತಿದೆ. ಇದು ಅನಪೇಕ್ಷಿತವಾದರೂ ಅನಿರೀಕ್ಷಿತವೇ? ಅಲ್ಲಿ ಏನಾಯಿತು, ಅದಕ್ಕೇನು ಕಾರಣ? ಈಗ ಎಲ್ಲಿ ಏನು ಆಗಬೇಕಿದೆ? ಯಾವ ಎಚ್ಚರಿಕೆಗಳನ್ನು ತೆಗೆದುಕೊಳ್ಳಬೇಕಿದೆ? ಎಂದು ವೈಜ್ಞಾನಿಕವಾಗಿ ವಿವರಿಸುವ ಪುಟ್ಟ ಪ್ರಯತ್ನ ಈ ಲೇಖನ–ಸಂ.**

ಎಲ್ಲ ನೈಸರ್ಗಿಕ ಜಲಮೂಲಗಳ ಜಲಾನಯನ ಪ್ರದೇಶಗಳಿಗೆ ತಮ್ಮದೇ ಆದ ಸಂಗ್ರಹಣಾ ಸಾಮರ್ಥ್ಯವಿದ್ದು, ಸಾಮಾನ್ಯವಾಗಿ ಅವು ಪ್ರವಾಹಗಳನ್ನಾಗಲೀ, ಬರವನ್ನಾಗಲೀ ತಡೆದುಕೊಳ್ಳುವ ಶಕ್ತಿಯನ್ನು ಹೊಂದಿರುತ್ತದೆ (ನಾವು ಭೂಮಿಯ ಸಮಗ್ರ ಭೌತಿಕ ಪರಿಸರವನ್ನು ಕಾಪಾಡಿಕೊಂಡಿದ್ದೇ ಆದರೆ....). ಪಶ್ಚಿಮಘಟ್ಟ ಕುರಿತ ನಮ್ಮ ಅಧ್ಯಯನಗಳು, ಸ್ಥಳೀಯ ನೈಸರ್ಗಿಕ ಸಸ್ಯಸಂಪತ್ತಿನಿಂದ ಕೂಡಿದ ಜಲಾನಯನ ಪ್ರದೇಶಗಳಲ್ಲಿ ನೀರಿನ ಇಂಗುವಿಕೆ ಹೆಚ್ಚು (ಸುಮಾರು ೪೦ ರಿಂದ ೫೦% ನಷ್ಟು), ಆದರೆ ಒಂದೇ ಜಾತಿಯ ಮರಗಳ ನೆಡುತೋಪುಗಳಿಂದ ಕೂಡಿದ ಜಲಾನಯನ ಪ್ರದೇಶಗಳಲ್ಲಿ ಇಂಗುವಿಕೆಯ ಪ್ರಮಾಣ ಕೇವಲ ೧೫ ರಿಂದ ೨೦% ಎಂದು ಹೇಳುತ್ತವೆ. ನೈಸರ್ಗಿಕ ಕಾಡು ಅಥವಾ ನೆಡುತೋಪುಗಳನ್ನು ಕಳೆದುಕೊಂಡ ಅಥವಾ ನೆಲಸಮಗೊಂಡ ಜಲಾನಯನ ಪ್ರದೇಶಗಳಲ್ಲಂತೂ ಇಂಗುವಿಕೆಯ ಸಾಮರ್ಥ್ಯ ಸ್ವಲ್ಪವೂ ಇಲ್ಲದಂತಾಗಿದೆ. ಸ್ಥಳೀಯ ಸಹಜ ಸಸ್ಯಸಂಪತ್ತು ಹೆಚ್ಚಿರುವ ಜಲಾನಯನ ಪ್ರದೇಶಗಳಲ್ಲಿ ಸರ್ವಋತು ತೊರೆಗಳೂ, ಕೃತಕ ನೆಡುತೋಪುಗಳಿರುವ ಜಲಾನಯನ ಪ್ರದೇಶಗಳಲ್ಲಿ ಸುಮಾರು ೬–೮ ತಿಂಗಳು ಹರಿಯುವ ತೊರೆಗಳೂ, ಇನ್ನುಳಿದ ಅತಿಕ್ರಮಗಳಿಗೊಳಗಾದ ಜಲಾನಯನ ಪ್ರದೇಶಗಳಲ್ಲಿ ಕೆಲಕಾಲ(ಸುಮಾರು ೪ ತಿಂಗಳು) ಮಾತ್ರ ಹರಿಯುವ ತೊರೆಗಳಿರುವುದನ್ನು ನೋಡಿದಾಗ ಅದು ಇನ್ನೂ ಹೆಚ್ಚು ಸ್ಪಷ್ಟವಾಗಿ ಗೊತ್ತಾಗುತ್ತದೆ. ಬೃಹತ್ ಪ್ರಮಾಣದ, ವಿವೇಚನಾರಹಿತ ಭೂ ದುರ್ಬಳಕೆ ಮತ್ತು ಸ್ಥಳೀಯವಲ್ಲದ ಏಕಜಾತಿ ಮರಗಳ ನೆಡುತೋಪುಗಳಿಂದ ಸುಮಾರು ೨೪ ರಿಂದ ೩೦% ನೈಸರ್ಗಿಕ ಕಾಡು ಕಡಿಮೆಯಾಗಿ, ಜಲಾನಯನ ಪ್ರದೇಶಗಳ ಇಂಗುವಿಕೆಯ ಸಾಮರ್ಥ್ಯ ಕುಂಠಿತಗೊಂಡದ್ದೇ ಈ ಮಹಾಪ್ರವಾಹಕ್ಕೆ ಪ್ರಮುಖ ಕಾರಣವಾಗಿದೆ. ಈ ಭಾಗವು ಅಭಿವೃದ್ಧಿ ಹೊಂದಬೇಕಾಗಿದೆ ನಿಜ. ಆದರೆ ಪರ್ಯಾಯದ್ವೀಪವಾಗಿರುವ ಭಾರತಕ್ಕೆ ಆಹಾರ ಮತ್ತು ನೀರಿನ ಭದ್ರತೆಯನ್ನು ಒದಗಿಸುತ್ತಿರುವ ಬಹಳ ಸೂಕ್ಷ್ಮವಾಗಿರುವ ಜೈವಿಕ ಪರಿಸರ ವ್ಯವಸ್ಥೆಯನ್ನು ಛಿದ್ರಗೊಳಿಸುವ ಮೂಲಕವಲ್ಲ. ಕುರುಡಾಗಿ ಅಭಿವೃದ್ಧಿಯ ಬೆನ್ನಟ್ಟುವುದರಿಂದ ಮತ್ತು ಅರಣ್ಯಪ್ರದೇಶದ ಅತಿಕ್ರಮಣಗಳಿಗೆ ಅವಕಾಶ ಕೊಡುವುದರಿಂದ ಪ್ರವಾಹ ಇಲ್ಲವೇ ನೀರಿನ ಕೊರತೆ ಉಂಟಾಗುತ್ತದಷ್ಟೇ. ಆಯಾ ರಾಜ್ಯಗಳ ಅರಣ್ಯ ಇಲಾಖೆಯ ಅಧಿಕಾರಿಗಳನ್ನೇ ಈ ಅರಣ್ಯ ಅತಿಕ್ರಮಣಗಳಿಗೆ ಹೊಣೆಗಾರರನ್ನಾಗಿ ಮಾಡಬೇಕು.

ಈ ಭೂ ಭಾಗದ ಪ್ರವಾಹಗಳಿಗೆ ಪ್ರಮುಖ ಕಾರಣಗಳೆಂದರೆ: ೧) ಜಲಾನಯನ ಪ್ರದೇಶಗಳ ದುರ್ಬಳಕೆ, ೨) ನಿರ್ಣಾಯಕ ಸ್ಥಾನಗಳಲ್ಲಿರುವ ಅಧಿಕಾರಿಗಳಲ್ಲಿ ಹೊಣೆಗಾರಿಕೆಯ ಕೊರತೆ, ೩) ಪಾರಿಸರಿಕವಾಗಿ ಬಹಳ ಸೂಕ್ಷ್ಮವಾಗಿರುವ ನದೀ ಪಾತ್ರಗಳಲ್ಲಿ ಬೃಹತ್ ಪ್ರಮಾಣದ ಬೇಜವಾಬ್ದಾರಿಯ ಭೂ ಪರಿವರ್ತನೆ, ೪) ವ್ಯವಸ್ಥಿತವಲ್ಲದ ರಸ್ತೆ ಅಗಲೀಕರಣ, ರೈಲ್ವೇ ಯೋಜನೆಗಳಂತಹ ಅತಿಯಾದ ಅಭಿವೃದ್ಧಿ ಚಟುವಟಿಕೆಗಳು, ೫) ನದೀ ತಿರುವು ಯೋಜನೆಗಳನ್ನು ಕುಡಿಯುವ ನೀರಿನ ಯೋಜನೆಗಳೆಂದು ಬಿಂಬಿಸಿ ನ್ಯಾಯವ್ಯವಸ್ಥೆಯನ್ನೇ ಬೇಸ್ತುಬೀಳಿಸುವುದು ಮತ್ತು ಪರಿಸರ ಇಲಾಖೆಯಿಂದ ಅನುಮತಿ ಪಡೆಯುವ ಮತ್ತು ಸಾಮಾಜಿಕ ಪರಿಣಾಮಗಳ ಮೌಲ್ಯಮಾಪನ ಮಾಡುವ ನಿಯಮಾವಳಿಗಳನ್ನು ಕಡೆಗಣಿಸುವುದು, ೬) ನೈಸರ್ಗಿಕ ಸಂಪನ್ಮೂಲಗಳನ್ನು ಲೂಟಿ ಮಾಡುವ ಏಕೈಕ ಉದ್ದೇಶದೊಂದಿಗೆ ಶಾಮೀಲಾಗಿರುವ ಇಂಜಿನಿಯರುಗಳು, ಗುತ್ತಿಗೆದಾರರು ಮತ್ತು ಭ್ರಷ್ಟ ಅಧಿಕಾರಿಗಳ ಹಿತಾಸಕ್ತಿಗಾಗಿ ಜಾರಿಯಾಗುವ ಅವೈಜ್ಞಾನಿಕವಾದ ಯೋಜನೆಗಳು.

ಕಾಲಕಾಲಕ್ಕೆ ಬೀಳುವ ಮಳೆಯ ಪ್ರಮಾಣಗಳ ದತ್ತಾಂಶವನ್ನು ನೋಡಿದರೆ, ೬–೮ ವರ್ಷಗಳ ಮಳೆಚಕ್ರವನ್ನು ಗುರುತಿಸಬಹುದು (ಸುಮಾರು ಏಳು ವರ್ಷ ವಾಡಿಕೆಗಿಂತ ಕಡಿಮೆ ಮತ್ತು ಏಳು ವರ್ಷ ವಾಡಿಕೆಗಿಂತ ಹೆಚ್ಚು ಮಳೆ). ಜಲಾನಯನ ಪ್ರದೇಶಗಳ ಜೈವಿಕ ಪರಿಸರವನ್ನು ಸಮಗ್ರವಾಗಿ ನಿರ್ವಹಣೆ ಮಾಡುವ ಮೂಲಕ ಅತಿವೃಷ್ಟಿ ಮತ್ತು ಪ್ರವಾಹಗಳನ್ನು ತಗ್ಗಿಸಬಹುದು. ಹರಿವಿನ ನೈಸರ್ಗಿಕ ಪಾತ್ರಗಳನ್ನು ಕಾಂಕ್ರೀಟೀಕರಣ ಮಾಡುವುದರಿಂದ ಮತ್ತು ಕಿರಿದುಗೊಳಿಸುವುದರಿಂದ ಪಾತ್ರಗಳು ತಮ್ಮ ನೈಸರ್ಗಿಕ ಜಲವೈಜ್ಞಾನಿಕ ಕಾರ್ಯಗಳನ್ನು (ಇಂಗುವಿಕೆ, ಅಂತರ್ಜಲ ಮರುಪೂರಣ, ಪುನಶ್ಚೇತನಗೊಳ್ಳುವಿಕೆ) ನಿರ್ವಹಿಸಲಾಗದೇ ಹೆಚ್ಚೆಚ್ಚು ಪ್ರವಾಹಗಳುಂಟಾಗುತ್ತವೆ. ಸಂಯುಕ್ತ ಸರ್ಕಾರವು ಮಧ್ಯಸ್ತಿಕೆ ವಹಿಸಿ, ದೇಶದಲ್ಲಿನ ಪಾರಿಸರಿಕವಾಗಿ ಸೂಕ್ಷ್ಮವಾಗಿರುವ ಪ್ರದೇಶಗಳನ್ನು ಗುರುತಿಸಿ, ನೀರು ಮತ್ತು ಆಹಾರ ಭದ್ರತೆಗಾಗಿ ಈ ಪ್ರದೇಶಗಳನ್ನು ಅರಣ್ಯ ಅತಿಕ್ರಮಣದಿಂದ, ಮಾಫಿಯಾ ಮತ್ತು ಲೂಟಿಕೋರರ ಹಿಡಿತದಿಂದ ಕಾಪಿಟ್ಟು ಸಂರಕ್ಷಿಸಬೇಕು. ಪರಿಸರ ಪ್ರಜ್ಞೆಯುಳ್ಳ ಸದೃಢ ಯುವಜನತೆ ಮತ್ತು ಆರೋಗ್ಯವಂತ ಜೈವಿಕ ಪರಿಸರ ವ್ಯವಸ್ಥೆ–ನೈಸರ್ಗಿಕ ಸಂಪನ್ಮೂಲಗಳೊಂದಿಗೆ ದೇಶವು ಸಹಜವಾಗಿ ಅಭಿವೃದ್ಧಿ ಹೊಂದುತ್ತದೆ.



**(ಡಾ. ಟಿವಿ., ರಾಮಚಂದ್ರ ಅವರು ಬೆಂಗಳೂರಿನ ಭಾರತೀಯ ವಿಜ್ಞಾನ ಸಂಸ್ಥೆಯ ಪರಿಸರ ಅಧ್ಯಯನ ಕೇಂದ್ರದಲ್ಲಿ ಪ್ರಾಧ್ಯಾಪಕ–ಸಂಶೋಧಕರಾಗಿದ್ದಾರೆ)**

**(ಕನ್ನಡಕ್ಕೆ : ಟಿ.ಎಲ್. ರೇಖಾಂಬ)**

---

## ಲೋಹಿಯಾ ಜನ್ಮಶತಾಬ್ಧಿ ಪ್ರತಿಷ್ಠಾನ (ರಿ), ಶಿವಮೊಗ್ಗ

**ಸಮಾಜವಾದಿ ಅಧ್ಯಯನ ಶಿಬಿರ**–೨೦೧೮

ನಮ್ಮ ಪ್ರತಿಷ್ಠಾನವು ಕುಪ್ಪಳ್ಳಿಯ ರಾಷ್ಟ್ರಕವಿ ಕುವೆಂಪು ಪ್ರತಿಷ್ಠಾನದ ಸಹಯೋಗದೊಂದಿಗೆ ಪ್ರತಿ ವರ್ಷದಂತೆ ಈ ವರ್ಷವೂ ಬರುವ ಅಕ್ಟೋಬರ್ ೨೭ ಹಾಗೂ ೨೮ರಂದು (ಶನಿವಾರ ಮತ್ತು ಭಾನುವಾರ) ತನ್ನ ವಾರ್ಷಿಕ ಸಮಾಜವಾದಿ ಅಧ್ಯಯನ ಶಿಬಿರವನ್ನು ಏರ್ಪಡಿಸುತ್ತಿದೆ.

ಈ ಬಾರಿಯ ಶಿಬಿರದ ವಿಷಯ, 'ರಾಷ್ಟ್ರೀಯತೆಯ ಅರ್ಥ–ಅಪಾರ್ಥಗಳು' ಎಂಬುದಾಗಿರುತ್ತದೆ. ಈ ಶಿಬಿರದಲ್ಲಿ ನಾಡಿನ ಹಿರಿಯ ಚಿಂತಕರು ಉಪನ್ಯಾಸಗಳನ್ನು ನೀಡಿ ಚರ್ಚೆಗಳನ್ನು ನಡೆಸಿಕೊಡಲಿದ್ದಾರೆ. ಶಿಬಿರ ಪ್ರತಿ ದಿನ ಬೆಳಿಗ್ಗೆ ೯ರಿಂದ ಸಂಜೆ ೫ರವರೆಗೆ ಇದ್ದು, ಎರಡೂ ದಿನಗಳಂದು ಈ ಅವಧಿಯಲ್ಲಿ ಶಿಬಿರದಲ್ಲಿ ಭಾಗವಹಿಸುವಷ್ಟು ಸಮಯಾವಕಾಶವಿರುವವರು ಮಾತ್ರ ಶಿಬಿರಾರ್ಥಿಗಳಾಗಿ ಬರಬಹುದು.

ಶಿಬಿರಾರ್ಥಿಗಳಾಗಿ ಬರಲು ಆಸಕ್ತರಾದವರು ಈ ಮುಂದೆ ತಿಳಿಸಿರುವ ದೂರವಾಣಿ ಸಂಖ್ಯೆಗಳನ್ನು ಸಂಪರ್ಕಿಸಿ ತಮ್ಮ ಹೆಸರನ್ನು ನೊಂದಾಯಿಸಿಕೊಳ್ಳಬಹುದು. ಶಿಬಿರಾರ್ಥಿಗಳಿಗೆ ೨೬ರ ರಾತ್ರಿಯ ಊಟದಿಂದ ಹಿಡಿದು ೨೮ರ ಸಂಜೆಯ ಚಹಾದವರೆಗೆ ಸಾಮೂಹಿಕ ವಸತಿ ಮತ್ತು ಊಟೋಪಹಾರಗಳ ವ್ಯವಸ್ಥೆ ಮಾಡಲಾಗುವುದು. ಶಿಬಿರ ಶುಲ್ಕ ಒಬ್ಬರಿಗೆ : ರೂ. ೩೦೦/– ವಿದ್ಯಾರ್ಥಿಗಳಿಗೆ: ರೂ ೨೦೦/–

ಅಧ್ಯಾಪಕರು ಮತ್ತು ಸ್ನಾತಕೋತ್ತರ ವಿದ್ಯಾರ್ಥಿಗಳಿಗೆ ಪ್ರವೇಶದಲ್ಲಿ ಆದ್ಯತೆಯುಂಟು. ಸಂಪರ್ಕ ದೂರವಾಣಿ ಸಂಖ್ಯೆಗಳು: **೯೬೩೧೯೨೯೬೩೧ / ೯೪೪೮೦೧೪೯೮೪ / ೯೪೪೮೧೩೫೧೦೬೯**

**–ಡಿ.ಎಸ್. ನಾಗಭೂಷಣ**

ಅಧ್ಯಕ್ಷರು : ಲೋಹಿಯಾ ಜನ್ಮಶತಾಬ್ಧಿ ಪ್ರತಿಷ್ಠಾನ